158ನೇ ಮು.ಟಿ SL.NO:-39 ದಿ:-12-03-2026

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ.ಶರವಣ ಇವರು ದಿನಾಂಕ:12.03.2026ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಹೇಳಿಕೆ**

**ವಿಷಯ:** ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಬದುಕು ಮೂರ ಬಟ್ಟೆಯಾಗಿದೆ. 33 ಗೇಟ್‌ಗಳ ದುರಸ್ತಿ ಕಾರ್ಯವನ್ನು ಹಂತ ಹಂತವಾಗಿ ಕೈಗೊಳ್ಳಿ ಎಂದು ರೈತರು ಬೇಡಿಕೊಂಡರು ಸರ್ಕಾರ ಕೇಳಲಿಲ್ಲ. ಎಲ್ಲಾ ಗೇಟ್‌ಗಳನ್ನು ಕಿತ್ತು ಹಾಕಿದೆ. ಮುಂಗಾರು ಮಳೆ ಆರಂಭವಾಗುವ ಮುನ್ನ ಎಲ್ಲಾ ಗೇಟ್‌ಗಳನ್ನು ಅಳವಡಿಸಬೇಕು. ಇಲ್ಲಿಯವರೆಗೆ ಕೇವಲ 12 ಗೇಟ್‌ಗಳು ಮಾತ್ರ ಮುಗಿದಿದೆ. ಇಲ್ಲದಿದ್ದಲ್ಲಿ ಮಳೆ ನೀರು ಮತ್ತೇ ಹರಿದು ಹೋಗುತ್ತದೆ. ನಮಗೆ ಗೇಟ್ ಅಳವಡಿಸುವುದು ಅನಿವಾರ್ಯ ಇಲ್ಲದಿದ್ದರೆ, ಕಾಲುವೆ ಮೂಲಕ ನೀರು ಹರಿದು ಬರುವುದಿಲ್ಲ. ನದಿಯಲ್ಲಿ ಹರಿಯುವ ನೀರು ಆಂಧ್ರ ಮತ್ತು ತೆಲಂಗಾಣಕ್ಕೆ ಹರಿದು ಹೋಗುತ್ತದೆ. ಅವರಿಗೆ ಗೇಟ್ ಅಳವಡಿಕೆ ನಿಧಾನವಾದಷ್ಟು ಅನುಕೂಲ, ನಮ್ಮ ನೀರು ಅವರ ಪಾಲಾಗುತ್ತದೆ. ಆಂಧ್ರ ಮತ್ತು ತೆಲಂಗಾಣ ಶೇ.60 ರಷ್ಟು ಹಣ ತೊಡಗಿಸಿದ್ದರೆ, ನಮ್ಮ ಪಾಲು ಶೇ.40 ರಷ್ಟು ಒಟ್ಟು 133 ಟಿ.ಎಂ.ಸಿ. ನಲ್ಲಿ 33 ಟಿ.ಎಂ.ಸಿ. ನಷ್ಟು ಹೂಳು ತುಂಬಿ 100 ಟಿ.ಎಂ.ಸಿ. ಮಾತ್ರ ಶೇಖರಣೆಯಾಗುತ್ತದೆ. ಇನ್ನೂ ನವಿಲೆ ಸಮನಾಂತರ ಜಲಾಶಯ ನಿರ್ಮಾಣ ಯೋಜನೆ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಆಂಧ್ರ ಮತ್ತು ತೆಲಂಗಾಣಕ್ಕೆ ಇದರಲ್ಲಿ ಆಸಕ್ತಿ ಇಲ್ಲ. ಇದಕ್ಕೆ 15 ಸಾವಿರ ಕೋಟಿ ರೂ. ಬೇಕು. ಒಟ್ಟು 15 ಲಕ್ಷ ಎಕರೆ ರೈತರು ಬೀದಿಗೆ ಬಿದ್ದಿದ್ದಾರೆ. ರಾಯಚೂರು, ಕೊಪ್ಪಳ, ಬಳ್ಳಾರಿಯಲ್ಲಿ 350ಕ್ಕೂ ಹೆಚ್ಚು ಅಕ್ಕಿ ಗಿರಣಿಗಳಿವೆ. ಈಗ ಬಹುತೇಕ ಬಂದಾಗಿವೆ. ಅಕ್ಕಿ ಉತ್ಪಾದನೆ ಇಳಿಮುಖವಾಗುವುದು ಖಂಡಿತ. ರೈತರಿಗೆ ಗುಳೇ ಹೋಗುವುದು ಅನಿವಾರ್ಯ, ಅವರು ಬೆಂಗಳೂರು, ಹೈದರಾಬಾದ್, ಚೆನ್ನೈ, ಗೋವಾ, ಪುಣೆಗಳಿಗೆ ವಲಸೆ ಹೋಗುತ್ತಾರೆ. ತುಂಗಭದ್ರಾ ಜಲಾಶಯಕ್ಕೆ ಎಲ್ಲಾ 33 ಗೇಟ್ ಕೂಡಿಸುವವರೆಗೆ ಅವರು ಹಿಂತಿರುಗಿ ಬರುವುದಿಲ್ಲ. ಸರ್ಕಾರಕ್ಕೆ ಈ ಪರಿಸ್ಥಿತಿ ಮೊದಲೇ ತಿಳಿದಿತ್ತು. ಪರ್ಯಾಯ ಯೋಜನೆ ರೂಪಿಸಲು ಸಮಯವಿತ್ತು. ಕೇಂದ್ರದ ನರೇಗಾ ಯೋಜನೆ ವಿರುದ್ಧ ಹೋರಾಟ! ನಡೆಸಿದವರಿಗೆ ತುಂಗಭದ್ರ ಅಚ್ಚುಕಟ್ಟು ಪ್ರದೇಶದ ರೈತರ ಬವಣೆ ಅರ್ಥವಾಗಲಿಲ್ಲ ಎಂದರೆ ದೊಡ್ಡ ದುರಂತ ಮತ್ತೊಂದಿಲ್ಲ. ಅವರಿಗೆ ಕೇರಳದಿಂದ ಬಂದ ಜನರಿಗೆ ಬೆಂಗಳೂರಿನಲ್ಲಿ ಮನೆ ಕಟ್ಟಿಸಿಕೊಡುವುದರಲ್ಲಿ ಆಸಕ್ತಿ ಇದೆಯೇ ಹೊರತು ತಮಗೆ ಮತ ನೀಡಿದವರ ಬಗ್ಗೆ ಇಲ್ಲ. ನೆರೆಯ ಆಂಧ್ರ ಮತ್ತು ತೆಲಂಗಾಣ ಸರ್ಕಾರ ಅಲ್ಲಿಯ ರೈತರಿಗೆ ಎಲ್ಲಾ ಸವಲತ್ತು ಕಲ್ಪಿಸಿಕೊಟ್ಟಿದೆ. ಆದ್ದರಿಂದ ಅವರು ಯಾರೂ ವಲಸೆ ಬರುವುದಿಲ್ಲ. ಅಲ್ಲಿಯ ರೈತರ ಮಕ್ಕಳು ನಮ್ಮಲ್ಲಿ ಮೆಡಿಕಲ್ ಸೀಟು ಖರೀದಿ ಮಾಡಲು ಬರುತ್ತಾರೆ ನಮ್ಮ ರೈತರು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತ ತಮ್ಮ ಮಕ್ಕಳನ್ನು ಬೀದಿಯಲ್ಲಿ ಆಟವಾಡಲು ಬಿಡುವ ಪರಿಸ್ಥಿತಿ ಬಂದಿದೆ. ತುಂಗಭದ್ರ ಅಚ್ಚುಕಟ್ಟು ಪ್ರದೇಶ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲೇ ನೀರಾವರಿ ಕಂಡ ಪ್ರದೇಶ, ಆಂಧ್ರ ರೈತರಿಗೂ ನಮ್ಮ ರೈತರ ಪ್ರಗತಿಗೂ ಹೋಲಿಕೆ ಮಾಡಲು ಬರುವುದಿಲ್ಲ. ವಿಪರ್ಯಾಸವಾದರೂ ನಿಜ. ಅಲ್ಲಿನ ರಾಜಕಾರಣಿಗಳು ಒಂದು ಹನಿ ನೀರು ತಮಗೇ ಸಿಗುವಂತೆ ನೋಡಿಕೊಳ್ಳುತ್ತಾರೆ. ರೈತರು ಮತ್ತೆ ನರಗುಂದ ಬಂಡಾಯ ನಡೆಸಬೇಕಾದ ಕಾಲ ಬರಬಹುದು. ಆದ್ದರಿಂದ, ಸರ್ಕಾರವು ತಕ್ಷಣವೇ ಎಚ್ಚೆತ್ತುಕೊಂಡು ಅತೀ ಶೀಘ್ರದಲ್ಲಿ ಎಲ್ಲಾ 33 ಗೇಟುಗಳನ್ನು ಅಳವಡಿಸಬೇಕೆಂದು ಮಾನ್ಯ ಉಪ ಮುಖ್ಯ ಮಂತ್ರಿಯವರನ್ನು ಒತ್ತಾಯಿಸುತ್ತೇನೆ. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ:**

**1. ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ಬದಲಾವಣೆ ಕಾಮಗಾರಿ:**

ತುಂಗಭದ್ರಾ ಯೋಜನೆಯು ಅಂತರ ರಾಜ್ಯ (ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ) ಯೋಜನೆಯಾಗಿದ್ದು, ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ನಿರ್ವಹಣೆಯು ತುಂಗಭದ್ರಾ ಮಂಡಳಿ (TB Board)ಯ ವ್ಯಾಪ್ತಿಯಲ್ಲಿರುತ್ತದೆ.

ತುಂಗಭದ್ರಾ ಜಲಾಶಯದ ಗೇಟುಗಳನ್ನು ಬದಲಾಯಿಸುವ ಸಂಬಂಧದಲ್ಲಿ ತುಂಗಭದ್ರಾ ಮಂಡಳಿಯು ಈ ಕೆಳಕಂಡಂತೆ ಕ್ರಮ ವಹಿಸಿರುತ್ತದೆ:

ಆಗಸ್ಟ-2024ರಲ್ಲಿ ಕೊಚ್ಚಿಹೋದ ಗೇಟ್ ನಂ.19ಕ್ಕೆ ಹೊಸ ಗೇಟನ್ನು ಅಳವಡಿಸುವಿಕೆ ಕಾಮಗಾರಿಯನ್ನು M/s Hardware Tools & Machinary Projects Pvt. Ltd, Ahmedabad ಇವರಿಗೆ ದಿನಾಂಕ:23.04.2025ರಂದು ಗುತ್ತಿಗೆ ವಹಿಸಲಾಗಿದ್ದು, ಪ್ರಸ್ತುತ, ಹೊಸ ಗೇಟನ್ನು ಅಳವಡಿಸಲಾಗಿದೆ.

ಬಾಕಿ 32 ಗೇಟುಗಳನ್ನು ಬದಲಾಯಿಸುವ ಕಾಮಗಾರಿಯನ್ನು ಸಹಾ M/s Hardware Tools & Machinary Projects Pvt. Ltd, Ahmedabad ಇವರಿಗೆ ವಹಿಸಲಾಗಿದ್ದು, ಸದರಿ ಕಾಮಗಾರಿಗೆ 15 ತಿಂಗಳ ಕಾಲಾವಧಿ ನೀಡಲಾಗಿದೆ. ಕಾಮಗಾರಿಯ ಪ್ರಸ್ತುತ ಹಂತ ಈ ಕೆಳಕಂಡಂತಿದೆ:

- 32 ಗೇಟುಗಳ fabricationಗೆ ಅಗತ್ಯವಿರುವ materialಗಳನ್ನು procure ಮಾಡಲಾಗಿದೆ.
- 25 ಗೇಟುಗಳ fabrication ಪೂರ್ಣಗೊಂಡಿದ್ದು, 2 ಗೇಟುಗಳ fabrication ಪ್ರಗತಿಯಲ್ಲಿದೆ.
- 26 ಗೇಟುಗಳನ್ನು dismantle ಮಾಡಲಾಗಿದ್ದು, 2 ಗೇಟುಗಳ dismantling ಕಾರ್ಯ ಪ್ರಗತಿಯಲ್ಲಿದೆ.
- 16 ಗೇಟುಗಳ erection ಮಾಡಲಾಗಿದ್ದು, 3 ಗೇಟುಗಳ erection ಕಾರ್ಯ ಪ್ರಗತಿಯಲ್ಲಿದೆ.

ತುಂಗಭದ್ರಾ ಅಣೆಕಟ್ಟೆಯ 19ನೇ ಸಂಖ್ಯೆಯ ಗೇಟ್ ಕೊಚ್ಚಿಹೋದ ಘಟನೆಯ ನಂತರ ಅಣೆಕಟ್ಟೆಯ ಸುರಕ್ಷತೆ, ಬಾಕಿ 32 ಗೇಟುಗಳ ಸ್ಥಿತಿಗತಿ, ಗೇಟುಗಳ ಬದಲಾವಣೆ ಕುರಿತು ತುಂಗಭದ್ರಾ ಮಂಡಳಿಯೊಂದಿಗೆ ರಾಜ್ಯ ಸರ್ಕಾರವು ನಿರಂತರವಾಗಿ ಅನುಸರಣೆ ಮಾಡುತ್ತಿದೆ. ಮುಂಗಾರು ಹಂಗಾಮಿನಲ್ಲಿ ಬೆಳೆಗಳಿಗೆ ನೀರೊದಗಿಸಲು ಅನುಕೂಲವಾಗುವಂತೆ ಗೇಟುಗಳ ಬದಲಾವಣೆ ಕಾರ್ಯವನ್ನು ಆದ್ಯತೆ ಮೇರೆಗೆ ಮೇ-2026ರೊಳಗಾಗಿ ಪೂರ್ಣಗೊಳಿಸುವಂತೆ ತುಂಗಭದ್ರಾ ಮಂಡಳಿಯನ್ನು ಕೋರಲಾಗಿದೆ.

## 2. ನವಿಲೆ ಸಮನಾಂತರ ಜಲಾಶಯ ನಿರ್ಮಾಣ ಯೋಜನೆ

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದಾಗಿ ಉಂಟಾಗಿರುವ ಸಂಗ್ರಹಣೆಯಲ್ಲಿನ ಕೊರತೆಯನ್ನು ನೀಗಿಸಲು ಪರ್ಯಾಯ ಮಾರ್ಗೋಪಾಯವಾಗಿ ಕೊಪ್ಪಳ ಜಿಲ್ಲೆಯ ನವಲಿ ಗ್ರಾಮದ ಹತ್ತಿರ ಸಮತೋಲನಾ ಜಲಾಶಯ ನಿರ್ಮಿಸುವ ಯೋಜನೆಯನ್ನು ರೂಪಿಸಲಾಗಿದೆ.

2021-22ನೇ ಸಾಲಿನ ಏಕರೂಪ ದರಪಟ್ಟಿಯನ್ವಯ ಸಿದ್ಧಪಡಿಸಿರುವ ಸದರಿ ಯೋಜನೆಯ ರೂ.15,601.00 ಕೋಟಿ ಮೊತ್ತದ ವಿವರವಾದ ವರದಿಯನ್ನು ತುಂಗಭದ್ರಾ ಮಂಡಳಿಗೆ ಫೆಬ್ರುವರಿ-2024ರಲ್ಲಿ ಸಲ್ಲಿಸಲಾಗಿದ್ದು, ದಿನಾಂಕ:22.11.2024ರಂದು ನಡೆದ ತುಂಗಭದ್ರಾ ಮಂಡಳಿಯ ಸಭೆಯಲ್ಲಿ ಸದರಿ ವಿಷಯದ ಚರ್ಚೆಯಾಗಿರುತ್ತದೆ. ಈ ಯೋಜನೆಗೆ ಮೂರು ರಾಜ್ಯಗಳ ಒಪ್ಪಿಗೆಯು ಅತ್ಯಗತ್ಯವೆಂದು ಮಂಡಳಿಯು ಅಭಿಪ್ರಾಯಿಸಿದ್ದು, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಪರಿಶೀಲಿಸಿ, ಮುಂದಿನ ಸಭೆಗಳಲ್ಲಿ ಈ ವಿಷಯವನ್ನು ಚರ್ಚಿಸಲು ತೀರ್ಮಾನಿಸಲಾಗಿದೆ.

ಮುಂದುವರೆದು, ನವಲಿ ಯೋಜನೆ ಸೇರಿದಂತೆ ಪರ್ಯಾಯ ಯೋಜನೆಗಳ ಕುರಿತು ಸಹಮತ ಮೂಡಿಸಲು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಲು ಸಭೆ ನಡೆಸಲು ಈ ರಾಜ್ಯಗಳೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದ್ದು, ಪ್ರತಿಕ್ರಿಯೆ ನಿರೀಕ್ಷಿಸಲಾಗಿದೆ.

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

ಜಸಂಇ 58 ಎಂಎಲ್ಎ 2026